# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **935** |
| ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15-12-2025 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯಾದ್ಯಂತ ವಿವಿಧ ಖಾಸಗಿ ಹಾಗೂ ಸರ್ಕಾರಿ/ಅರೆ ಸರ್ಕಾರಿ ಕಂಪನಿ/ನಿಗಮ/ ಸಂಸ್ಥೆಗಳು ವಿದ್ಯುಚ್ಛಕ್ತಿ ಯೋಜನೆಗಳಿಗೆ ಸಂಬಂಧಿಸಿದಂತೆ ರೈತರ ಕೃಷಿ ಜಮೀನುಗಳಲ್ಲಿ ಅಳವಡಿಸಲಾಗುವ ವಿದ್ಯುತ್ ಸ್ಥಾವರ ಹಾಗೂ ವಿದ್ಯುತ್ ಲೈನ್‌ಗಳಿಗೆ ಯಾವ ಮಾನದಂಡಗಳನ್ನು ಅನುಸರಿಸಿ ಪರಿಹಾರ ಧನವನ್ನು ಪಾವತಿಸಲಾಗುತ್ತಿದೆ; (ವಿವರ ಒದಗಿಸುವುದು) | ರಾಜ್ಯಾದ್ಯಂತ ವಿವಿಧ ಖಾಸಗಿ ಹಾಗೂ ಸರ್ಕಾರಿ/ಅರೆ ಸರ್ಕಾರಿ ಕಂಪನಿ/ನಿಗಮ/ ಸಂಸ್ಥೆಗಳು ವಿದ್ಯುತ್ ಸ್ಥಾವರ ಮತ್ತು ವಿದ್ಯುತ್ ಲೈನ್ ಗಳಿಗೆ ಪರಿಹಾರ ನಿಗದಿಪಡಿಸಲು ಅನುಸರಿಸುತ್ತಿರುವ ಮಾನ-ದಂಡಗಳ ವಿವರಗಳು:<br><br>1. **ಉಪಕೇಂದ್ರ**: ಉಪಕೇಂದ್ರಗಳಿಗೆ ಅಗತ್ಯವಿರುವ ಖಾಸಗಿ/ ರೈತರ ಜಮೀನನ್ನು ಸರ್ಕಾರದ ನಿಯಮಾನುಸಾರ ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ಬೆಲೆಯನ್ನು, ಖಾಸಗಿ ಹಾಗೂ ಸರ್ಕಾರಿ/ಅರೆ ಸರ್ಕಾರಿ ಕಂಪನಿ/ನಿಗಮ/ ಸಂಸ್ಥೆಗಳು ಪಾವತಿಸಿ ಜಮೀನಿನನ್ನು ಖರೀದಿಸಬೇಕಾಗಿರುತ್ತದೆ.<br><br>2. **ಪ್ರಸರಣಾ ಮಾರ್ಗ**: ಪ್ರಸರಣಾ ಮಾರ್ಗ ನಿರ್ಮಾಣಕ್ಕೆ, ಭಾರತೀಯ ವಿದ್ಯುತ್ ಕಾಯಿದೆ-2003 ಹಾಗೂ ಭಾರತೀಯ ಟೆಲಿಗ್ರಾಫ್ ಕಾಯಿದೆ-1885 ಯ ಅನ್ವಯ, ಕೇಂದ್ರ . ವಿದ್ಯುತ್ ಮಂತ್ರಾಲಯವು (Ministry of Power) ಕಾಲಕಾಲಕ್ಕೆ ಹೊರಡಿಸುವ ಮಾರ್ಗ ಸೂಚಿಗಳನ್ವಯ, ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 376 ವಿಎಸ್‌ಸಿ 2022, ದಿನಾಂಕ: 20.08.2024, 22.1.2025 ಮತ್ತು 25.9.2025 ಆದೇಶಗಳಲ್ಲಿನ ಮಾರ್ಗಸೂಚಿಗಳು ಮತ್ತು ಜಿಲ್ಲಾಧಿಕಾರಿಗಳು ನಿಗದಿಪಡಿಸುವ ಭೂ ಪರಿಹಾರವನ್ನು ನೀಡಲಾಗುತ್ತಿದೆ.<br>ಆದೇಶದ ಪ್ರತಿಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ.<br><br>3. ಬೆಳೆ ನಾಶದ ಪರಿಹಾರವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ದರ ಮತ್ತು ಕೃಷಿ ಇಲಾಖೆಯಿಂದ ಕೃಷಿ ಉತ್ಪನ್ನಗಳ ಇಳುವರಿ ಮಾಹಿತಿಯನ್ನು ಪಡೆದು ಪರಿಹಾರವನ್ನು ನೀಡಲಾಗುತ್ತಿದೆ. ತೋಟಗಾರಿಕೆ ಗಿಡಗಳ ಪರಿಹಾರವನ್ನು ತೋಟಗಾರಿಕೆ ಇಲಾಖೆ ಹಾಗೂ ಅರಣ್ಯ |

| | | |
|---|---|---|
| | | ಗಿಡ/ಮರಗಳಿಗೆ ಅರಣ್ಯ ಇಲಾಖೆ ನಿಗಪಡಿಸುವ ದರದನ್ವಯ ಚಾಲ್ತಿಯಲ್ಲಿರುವ ನಿಯಮಾನುಸಾರ ಪರಿಹಾರವನ್ನು ನೀಡಲಾಗುತ್ತಿದೆ. |
| ಆ) | ಸದರಿ ಮಾನದಂಡಗಳ ಪ್ರಕಾರ ಒದಗಿಸಲಾಗುತ್ತಿದ್ದ ಪರಿಹಾರ ಧನ ತುಂಬಾ ಕಡಿಮೆ ಇರುವುದರಿಂದ ಅದನ್ನು ಹೆಚ್ಚಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು; (ವಿವರ ನೀಡುವುದು) | ಪರಿಹಾರ ಧನ ನಿಗದಿಪಡಿಸಲು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಮಾರ್ಗ ಸೂಚಿಗಳನ್ವಯ ರಾಜ್ಯದಲ್ಲಿ ಹೊರಡಿಸಿರುವ ಪ್ರಸ್ತುತ ಚಾಲ್ತಿಯಲ್ಲಿರುವ ಆದೇಶದ ವಿವರಗಳು ಕೆಳಕಂಡಂತಿವೆ<br><br>1. ಎನರ್ಜಿ 376 ಪಿಎಸ್‌ಸಿ 2022, ದಿನಾಂಕ: 20.08.2024: 66 ಕೆವಿ ಮೇಲ್ಪಟ್ಟ ಎಲ್ಲಾ ಪ್ರಸರಣಾ ಮಾರ್ಗಗಳಿಗೆ ಅನ್ವಯಿಸುವಂತೆ<br>2. ಎನರ್ಜಿ 376 ಪಿಎಸ್‌ಸಿ 2022, ದಿನಾಂಕ: 22.1.2025 (Stage wise compensation ವಿತರಣೆ ಬಗ್ಗೆ)<br>3. ಎನರ್ಜಿ 376 ಪಿಎಸ್‌ಸಿ 2022, ದಿನಾಂಕ: 25-9-2025 ರನ್ವಯ ಅಂತರ ರಾಜ್ಯ ಪ್ರಸರಣಾ ಮಾರ್ಗಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ.<br><br>ವಿದ್ಯುತ್ ಗೋಪುರ ತಳಭಾಗಕ್ಕೆ (plus 1 metre extension on each side) ಶೇ.200 ರಷ್ಟು ಪರಿಹಾರವನ್ನು ನಿಗದಿಪಡಿಸಲಾಗಿದೆ.<br>ಪ್ರಸರಣಾ ಮಾರ್ಗ ಹಾದು ಹೋಗುವ ಜಮೀನಿಗೆ (Corridor) ಶೇ.30 ರಷ್ಟು ಪರಿಹಾರವನ್ನು ಮತ್ತು ಹೆಚ್ಚುವರಿ ಶೇ.20 ರಷ್ಟು ಪರಿಹಾರವನ್ನು ಎತ್ತರದ ಮರಗಳಿರುವ ಪ್ರದೇಶಕ್ಕೆ ನಿಗದಿಪಡಿಸಲು ಆದೇಶಿಸಿದೆ. |
| ಇ) | ರೈತರ ಜಮೀನುಗಳಲ್ಲಿ ಒಂದು ವಿದ್ಯುತ್ ಸ್ಥಾವರ ಹಾಗೂ ವಿದ್ಯುತ್ ಲೈನ್ ಅಳವಡಿಸಿದ್ದಲ್ಲಿ ಅದರಿಂದ ಬರುವ ಕೃಷಿ ಆದಾಯವು ಸಂಪೂರ್ಣವಾಗಿ ನಿಂತು ಹೋಗುವುದರಿಂದ ಅದಕ್ಕೆ ಎಷ್ಟು ಪರಿಹಾರ ಧನವನ್ನು ನೀಡಲಾಗುತ್ತದೆ; (ವಿವರ ಒದಗಿಸುವುದು) | |
| ಈ) | ರೈತರ ಜಮೀನುಗಳಲ್ಲಿ ಒಂದು ಸಲ ವಿದ್ಯುತ್ ಸ್ಥಾವರ ಅಳವಡಿಸಿದ್ದಲ್ಲಿ ಶಾಶ್ವತವಾಗಿ ಇರುತ್ತದೆ, ಆದರೆ ಹೆಸರು ಮಾತ್ರ ಪಹಣಿ ಪತ್ರಿಕೆಗಳಲ್ಲಿ ರೈತರು ಭೂಮಾಲೀಕರಾಗಿರುತ್ತಾರೆ. ಅದರ ಬದಲಿಗೆ ವಿದ್ಯುತ್ ಸ್ಥಾವರ ಅಳವಡಿಸುವ ಕ್ಷೇತ್ರವನ್ನು ಸಂಪೂರ್ಣವಾಗಿ ಭೂ ಸ್ವಾಧೀನಪಡಿಸಿಕೊಳ್ಳುವುದು ಸೂಕ್ತವಲ್ಲವೇ; ಇದಕ್ಕೆ ಸರ್ಕಾರದ ಅಭಿಪ್ರಾಯವೇನು; (ವಿವರ ನೀಡುವುದು) | ಉಪಕೇಂದ್ರಗಳಿಗೆ ಅಗತ್ಯವಿರುವ ಖಾಸಗಿ/ ರೈತರ ಜಮೀನನ್ನು ಸರ್ಕಾರದ ನಿಯಮಾನುಸಾರ ಜಿಲ್ಲಾಧಿಕಾರಿಗಳು ನಿಗದಿಪಡಿಸಿದ ಬೆಲೆಯನ್ನು, ಖಾಸಗಿ ಹಾಗೂ ಸರ್ಕಾರಿ/ಅರೆ ಸರ್ಕಾರಿ ಕಂಪನಿ/ನಿಗಮ/ ಸಂಸ್ಥೆಗಳು ಪಾವತಿಸಿ ಜಮೀನಿನನ್ನು ಖರೀದಿಸಬೇಕಾಗಿರುತ್ತದೆ. ಆದ್ದರಿಂದ ಜಮೀನು ಪಹಣಿ ಪತ್ರಿಕೆಗಳಲ್ಲಿ ಪ್ರಸರಣಾ ಸಂಸ್ಥೆಯ ಮಾಲೀಕತ್ವವಿರುತ್ತದೆ.<br><br>ಆದರೆ, ಪ್ರಸರಣಾ ಮಾರ್ಗ ರಚನೆಗೆ, ಭಾರತೀಯ ವಿದ್ಯುತ್ ಕಾಯಿದೆ- 2003 ಹಾಗೂ ಭಾರತೀಯ ಟೆಲಿಗ್ರಾಫ್ ಕಾಯಿದೆ- 1885 ಯ ಅನ್ವಯ ರೈತರ ಜಮೀನುಗಳಲ್ಲಿ ವಿದ್ಯುತ್ ಗೋಪುರ ಹಾಗೂ ಪ್ರಸರಣಾ ಮಾರ್ಗಗಳು ಹಾದುಹೋಗಲಿದ್ದು, ಜಮೀನಿನ ಭೂ ಸ್ವಾಧೀನ ಪಡಿಸಿಕೊಳ್ಳದಿರುವುದರಿಂದ ಪ್ರಸರಣಾ ಸಂಸ್ಥೆಯು ಯಾವುದೇ ಹಕ್ಕನ್ನು ಜಮೀನಿನ ಮೇಲೆ ಹೊಂದಿರುವುದಿಲ್ಲ. |

| | | |
|---|---|---|
| | | ಪ್ರಸರಣಾ ಮಾರ್ಗ ಹಾದುಹೋಗುವ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡಲ್ಲಿ, ಪ್ರಸರಣಾ ಯೋಜನೆಯ ವೆಚ್ಚವು ಅತ್ಯಧಿಕವಾಗಲಿದ್ದು, ಸದರಿ ವೆಚ್ಚವನ್ನು ಪ್ರಸರಣಾ ಶುಲ್ಕದ ರೂಪದಲ್ಲಿ ರಾಜ್ಯದ ಗ್ರಾಹಕರೇ ಭರಿಸಬೇಕಾಗಿರುವುದರಿಂದ, ಸಾರ್ವಜನಿಕರ ಹಿತಾಸಕ್ತಿಯಿಂದ ಜಮೀನನನ್ನು ಖರೀದಿಸುವುದು ಸೂಕ್ತವಾಗಿರುವುದಿಲ್ಲ. |
| ಉ) | ಸದರಿ ಯೋಜನೆಗಳಿಗೆ ಭೂಸ್ವಾಧೀನಪಡಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಜಾರಿಯಲ್ಲಿರುವ ಕಾಯ್ದೆ/ ನಿಯಮಾವಳಿಗಳಿಗೆ ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಭಾರತೀಯ ವಿದ್ಯುತ್ ಕಾಯಿದೆ- 2003 ಹಾಗೂ ಭಾರತೀಯ ಟೆಲಿಗ್ರಾಫ್ ಕಾಯಿದೆ- 1885 ಯ ಅನ್ವಯ ಪ್ರಸರಣಾ ಮಾರ್ಗಗಳನ್ನು ರಚಿಸಲಾಗುತ್ತಿರುವುದರಿಂದ ಹಾಗೂ ಪ್ರಸರಣಾ ಮಾರ್ಗಗಳು ಹಾದುಹೋಗುವ ಜಮೀನನ್ನು ಖರೀದಿಸುವುದು / ಭೂ ಸ್ವಾಧೀನಪಡಿಸಿಕೊಳ್ಳುವುದು ಸಾರ್ವಜನಿಕರ ಹಿತಾಸಕ್ತಿಯಿಂದ ಸೂಕ್ತವಾಗಿರುವುದಿಲ್ಲವಾದ್ದರಿಂದ ಪ್ರಸ್ತುತ ಜಾರಿಯಲ್ಲಿರುವ ಕಾಯ್ದೆ/ ನಿಯಮಾವಳಿಗಳಿಗೆ ತಿದ್ದುಪಡಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಎನರ್ಜಿ 300 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಕರ್ನಾಟಕ ಸರ್ಕಾರದ ನಡಾವಳಿಗಳು** 6ನಂ೮೦೮

ವಿಷಯ : ರಾಜ್ಯದಲ್ಲಿ ಅಂತರ-ರಾಜ್ಯ ಪ್ರಸರಣಾ ಮಾರ್ಗ (ISTS) ರಚನೆಯ ಸಂಬಂಧ ಭೂಮಾಲೀಕರಿಗೆ ಪರಿಹಾರ ನಿಗದಿಪಡಿಸಲು ಕೇಂದ್ರ ಸರ್ಕಾರದ Supplementary guidelines ಅಳವಡಿಸಿಕೊಳ್ಳುವ ಬಗ್ಗೆ

ಓದಲಾಗಿದೆ:
1) ಕೇಂದ್ರ ಇಂಧನ ಮಂತ್ರಾಲಯದ ಮಾರ್ಗಸೂಚಿ ಸಂಖ್ಯೆ F.No. 3/4/2016-Trans-Part (4) ದಿನಾಂಕ 21.3.2025
2) ದಿನಾಂಕ 23.5.2025 ರಂದು ನಡೆದ ದಕ್ಷಿಣ ಪ್ರಾಂತದ ಇಂಧನ ಸಚಿವರುಗಳ ಸಮ್ಮೇಳನ ಸಭೆಯ ನಡವಳಿಗಳು
3) PGCIL ಪತ್ರ ಸಂಖ್ಯೆ SR-II/PSEM/2025/3178 ದಿನಾಂಕ 25.6.2025
4) ರಾಜ್ಯದ ಸರ್ಕಾರಿ ಆದೇಶ ಸಂಖ್ಯೆ Energy 376 VSC 2022, ದಿನಾಂಕ: 20.8.2024 & ದಿನಾಂಕ 22.1.2025

******

**ಪ್ರಸ್ತಾವನೆ :**

ಅಂತರ ರಾಜ್ಯ ಪ್ರಸರಣಾ ಮಾರ್ಗಗಳ (Inter State Transmission System (ISTS) Lines) ನಿರ್ಮಾಣಕ್ಕೆ ಸಂಬಂಧಿಸಿದಂತೆ ಭೂಮಾಲೀಕರಿಗೆ ಪರಿಹಾರ ನಿಗದಿಪಡಿಸಲು, ಕೇಂದ್ರ ಸರ್ಕಾರವು ಮೇಲೆ ಓದಲಾದ (1) ರಲ್ಲಿ Supplementary Guidelines for payment of compensation in regard to Right of Way (RoW) for transmission lines ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ. ಸದರಿ ಮಾರ್ಗ ಸೂಚಿಯು, ಅಂತರ ರಾಜ್ಯ ಪ್ರಸರಣಾ ಮಾರ್ಗ ರಚನೆಗೆ Guidline value, ಇದರಂತೆ ನಿಗದಿಪಡಿಸಿದ ಪರಿಹಾರವು ಮಾರುಕಟ್ಟೆ ದರಕ್ಕಿಂತ ಕಡಿಮೆ ಇದೆಯೆಂದು ಭೂ ಮಾಲೀಕರಿಂದ ವಿರೋಧ ವ್ಯಕ್ತವಾಗುವಂತಹ ಪ್ರಕರಣಗಳಿಗೆ ಮಾತ್ರ ಅನ್ವಯವಾಗುತ್ತದೆಯೆಂದು ತಿಳಿಸಲಾಗಿದೆ.

ದಿನಾಂಕ 23.5.2025 ರಂದು ನಡೆದ ದಕ್ಷಿಣ ಪ್ರಾಂತದ ಇಂಧನ ಸಚಿವರುಗಳ ಸಮ್ಮೇಳನ ಸಭೆಯಲ್ಲಿ, ISTS Lines ರಚನೆಗೆ ಎದುರಾಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಿ ಶೀಘ್ರವಾಗಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು, ಭೂಮಾಲೀಕರಿಗೆ ಮಾರುಕಟ್ಟೆ ದರದಲ್ಲಿ ಪರಿಹಾರ ನಿಗದಿಪಡಿಸುವಂತೆ ಮತ್ತು ಮಾರುಕಟ್ಟೆ ದರ ನಿಗದಿ ಪಡಿಸಲು ಅನುಸರಿಸಬೇಕಾದ ಕ್ರಮಗಳನ್ನು ಮೇಲೆ ಓದಲಾದ (1) ರ ಮಾರ್ಗಸೂಚಿಯಲ್ಲಿ ತಿಳಿಸಿರುವುದರಿಂದ, ಸದರಿ ಮಾರ್ಗಸೂಚಿಗಳನ್ನು ಶೀಘ್ರವಾಗಿ ರಾಜ್ಯದಲ್ಲಿ ಅಳವಡಿಸಿಕೊಳ್ಳುವಂತೆ ಕೇಂದ್ರ ಇಂಧನ ಮಂತ್ರಿಗಳು ಮೇಲೆ ಓದಲಾದ (2) ರ ನಡವಳಿಗಳಲ್ಲಿ ಸೂಚಿಸಿರುತ್ತಾರೆ. ಈ ವಿಷಯವನ್ನು ಪ್ರಸ್ತಾಪಿಸಿ, ಮೇಲೆ ಓದಲಾದ (3) ರ ಪತ್ರದಲ್ಲಿ PGCIL ಸಂಸ್ಥೆಯು, ಅಂತರ ರಾಜ್ಯ ಪ್ರಸರಣಾ ಮಾರ್ಗಗಳ ನಿರ್ಮಾಣಕ್ಕೆ ಎದುರಾಗುತ್ತಿರುವ ಸಮಸ್ಯೆಗಳ ಇತ್ಯರ್ಥಕ್ಕಾಗಿ ರಾಜ್ಯ ಸರ್ಕಾರದಿಂದ ಅಗತ್ಯ ಕ್ರಮವಹಿಸುವಂತೆ ಕೋರಿರುತ್ತದೆ. ಈ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

ಅದರಂತೆ, ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ Energy 376 VSC 2022,**

**ಬೆಂಗಳೂರು, ದಿನಾಂಕ :25-9-2025**

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ರಾಜ್ಯದಲ್ಲಿ ಅಳವಡಿಸಲಾಗುವ ISTS (PGCIL / PPP ಮಾದರಿಯ ISTS /ಖಾಸಗಿ ವಲಯದ) ಪ್ರಸರಣಾ ಮಾರ್ಗಗಳ ರಚನೆಗೆ ಕೇಂದ್ರ ಸರ್ಕಾರದ ದಿನಾಂಕ 21.3.2025 ರ *"Supplementary*

*Guidelines for payment of compensation in regard to Right of Way (RoW) for transmission lines"* ಮಾರ್ಗಸೂಚಿಯನ್ವಯ, ಹಾಗೂ ಕವಿಪ್ರನಿನಿಯ ಸದಸ್ಯರನ್ನು ಸೇರಿಸಿ ಈ ಕೆಳಕಂಡಂತೆ ಸಮಿತಿ ರಚಿಸಿದೆ.

I. **Committee for Market Rate Determination**-The market rate of land shall be determined by the following Market Rate Committee (MRC) based on the valuation by independent land valuers:

| | | |
|---|---|---|
| 1 | District Magistrate/District Collector/Deputy Commissioner his/her nominee (not below Sub-Divisional Magistrate) | Chairperson |
| 2 | Representative of land owners | Member |
| 3 | Nominee of ISTS Transmission Service Provider (TSP) | Member |
| 4 | Superintending Engineer (Projects) of KPTCL of the concerned Area | Member |

The District Magistrate/District Collector/Deputy Commissioner may co-opt one additional member as may be required"

II. **Applicability and Land valuation methodology** ಅಂಶಗಳು ಕೇಂದ್ರ ಇಂಧನ ಮಂತ್ರಾಲಯದ ಮಾರ್ಗಸೂಚಿ ಸಂಖ್ಯೆ F.No. 3/4/2016-Trans-Part (4) ದಿನಾಂಕ 21.3.2025 ರಂತೆ ಅನ್ವಯಿಸುತ್ತವೆ.

III. **Compensation Rates** – Tower base and Right of way (RoW) Corridor ಗೆ ಪರಿಹಾರ ಮೊತ್ತದ ಶೇಕಡಾ ದರಗಳು ರಾಜ್ಯದ ಸರ್ಕಾರಿ ಆದೇಶ ಸಂಖ್ಯೆ Energy 376 VSC 2022, ದಿನಾಂಕ: 20.8.2024 & ದಿನಾಂಕ 22.1.2025ರಂತೆ ಅನ್ವಯಿಸುತ್ತವೆ.

PGCIL / PPP ಮಾದರಿ /ಖಾಸಗಿ ವಲಯದ ISTS ಪ್ರಸರಣಾ ಮಾರ್ಗಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಪ್ರಸರಣಾ ಮಾರ್ಗಗಳಿಗೆ ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ರಾಜ್ಯದ ಸರ್ಕಾರಿ ಆದೇಶ ಸಂಖ್ಯೆ Energy 376 VSC 2022, ದಿನಾಂಕ: 20.8.2024 & ದಿನಾಂಕ 22.1.2025ರಂತೆ ಅನ್ವಯಿಸಲಿವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

(ವಿನೋದ್ ಕುಮಾರ್ ಡಿ.ಎಂ.)

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಇವರಿಗೆ:-

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ

ಪ್ರತಿ:-

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

3. ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು.
4. Executive Director, PGCIL, ಸಿಂಗನಾಯಕನಹಳ್ಳಿ, ಯಲಹಂಕ, Near RTO, ಬೆಂಗಳೂರು.
5. ಎಲ್ಲಾ ಜಿಲ್ಲಾಧಿಕಾರಿಗಳು, ಕರ್ನಾಟಕ ರಾಜ್ಯ.
6. ಮಾನ್ಯ ಇಂಧನ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು - ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ
7. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು
8. ಅಪರ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು

F.No. 3/4/2016-Trans-Part(4)
Government of India
Ministry of Power
Shram Shakti Bhavan, New Delhi –110 001.
****

Dated: 21.03.2025

To

1. Chief Secretaries/Administrators of all the States/UTs.
2. Chairperson, CEA, New Delhi – with a request to disseminate the subject guidelines to all the stakeholders.
3. Additional Chief Secretaries/Principal Secretaries/Secretaries of Energy of all States/UTs.
4. Secretary, CERC, New Delhi.
5. CMD, Grid India, New Delhi.
6. COO, CTUIL, Gurugram.
7. CMDs of State Power Utilities/SEBs.
8. All Transmission Licensees through COO, CTUIL

**Subject: Supplementary Guidelines for payment of compensation in regard to Right of Way (RoW) for transmission lines.**

Sir,

The Central Government vide letter No. 3/4/2016-Trans-Part (4) dated 14.06.2024 has issued guidelines for determination of compensation for laying Inter-State Transmission System (ISTS) lines under Sections 67 and 68 of the Electricity Act, 2003, read with Sections 10 and 16 of the Indian Telegraph Act, 1885, in addition to the compensation for normal crop and tree damages (hereinafter referred as *RoW Guidelines*). As per these guidelines, compensation shall ordinarily be based on the Circle rates/Guideline value/Stamp Act rates of the land, except where the market rate exceeds the Circle rate/Guideline value/Stamp Act rates. In such instances, the land value shall be determined based on the prevailing market rate as ascertained by the District Magistrate/District Collector/Deputy Commissioner in the manner as may be specified by the State Government. However, many States have yet to specify the manner of determination of market rate, and land owners have raised concerns that compensation is still being proposed at unacceptable circle rates which are significantly lower than market rates.

21/3/25

2. This issue is more pronounced in urban and semi-urban areas, where District Collectors face difficulties in arriving at a fair market rate. Additionally, while land falling under RoW corridors can still be used for agriculture in rural areas, land in urban planning and urban areas cannot be used for development due to changes in land use. As a result, the 30% compensation paid for RoW in rural areas has been reported to be inadequate for urban and urban-planning areas, where landowners incur higher opportunity costs.

3. After careful consideration of the matter, the Central Government hereby issues the following supplementary guidelines for assessing the market rate of land for the limited purpose of payment of RoW compensation for laying of ISTS lines.

## SUPPLEMENTARY GUIDELINES FOR DETERMINATION OF MARKET RATE AND ROW COMPENSATION FOR ISTS LINES

**1. Applicability:** These supplementary guidelines shall apply to Inter-State Transmission System lines only in cases where landowners have objected to the compensation because the Circle Rates are below the Market Rates. State Governments may adopt these guidelines in their entirety or issue their own modified guidelines. These guidelines shall apply in cases where State Governments have yet to specify the manner of determination of market value of land.

**2. Committee for Market Rate Determination**: The market rate of land shall be determined by the following Market Rate Committee (MRC) based on the valuation by independent land valuers:

i. District Magistrate/District Collector/Deputy Commissioner or his/her nominee (not below Sub-Divisional Magistrate) - Chair
ii. Representative of land owners - Member
iii. Nominee of ISTS Transmission Service Provider (TSP) – Member

The District Magistrate/District Collector/Deputy Commissioner may co-opt upto two additional members as may be required.

21/3/25

3. **Land Valuation Methodology:**

(1) MRC shall appoint two valuers—one nominated by the TSP and the other by the representative of landowners. The MRC shall engage the land valuers empanelled by the Insolvency and Bankruptcy Board of India (IBBI) as per the list available at website of IBBI (https://ibbi.gov.in). The valuers should preferably be from the same State or, if an adequate pool of valuers is not available, from adjoining States. The reference market rate shall be determined as specified below:

(i) If the difference in the market rates worked out by valuers is less than 20% over the lowest value, then average value of the two valuations shall be taken as the reference market rate.

(ii) If the difference exceeds 20%, MRC may negotiate the reference market rate.

(iii) Else, or if negotiation fails, then MRC shall engage a third valuer, and the reference market value shall be determined as the average of the two closest valuations.

(2) The assessed reference market rate shall serve as the basis for determination of market rate by the MRC.

(3) The professional fee/charges of the land valuers shall be borne by the TSP and shall form part of the RoW compensation cost.

4. **Compensation Rates:** (1) The compensation for tower base shall be as per RoW guidelines dated 14.06.2024.

(2) The compensation amount for Right-of-Way (RoW) corridor shall be as follows for ISTS lines:

i. 30% of the land value in rural areas.
ii. 60% of the land value in municipal corporations and metropolitan areas notified by the State Government.
iii. 45% of the land value for municipalities, nagar panchayats and all other urban planning areas notified by the State Government.

5. The District Collector may allow the construction of ISTS lines to proceed without obstruction on the condition that compensation would be paid based on the market rate determined by the MRC. The market rate determination should ideally be completed within one month from the date of application by TSP.

[signature] 21/3/25

6. **Pass through by CERC**: If the actual RoW compensation paid by the TSP due to implementation of these guidelines or the extant guidelines /policy of the appropriate government differs from the base RoW compensation determined for the ISTS Scheme as per Tariff Based Competitive Bidding (TBCB) Guidelines, the same shall be eligible for pass through under Change in Law (CIL) by the Central Electricity Regulatory Commission.

Yours faithfully,

(Naorem Indrakumar Singh)
Under Secretary (Trans)
Tele: 011- 23325242

Copy to:

1. Secretaries to the Government of India.
2. Prime Minister's Office.
3. Technical Director, NIC, Ministry of Power – with the request to upload on the website of Ministry of Power.
4. PS to MoP.
5. Addl. PS to MoSP.
6. Sr. PPS/ PPS/ PS to Secretary (Power)/ AS(Trans)/ JS&FA/ AS (IC)/ All Joint Secretaries/ EA/ All Directors/ Deputy Secretaries, Ministry of Power.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1335 ಕ್ಕೆ ಅನುಬಂಧ: ಉಪ ಪ್ರಶ್ನೆ (ಅ,ಆ ಮತ್ತು ಇ)

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ


ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ದೂರವಾಣಿ ಸಂಖ್ಯೆ : 080-22212343

ಅಂತರ್ಜಾಲ : https://kptcl.karnataka.gov.in

ಇ–ಮೇಲ್ ವಿಳಾಸ : director.ahr.kptcl@gmail.com


**ಸಂಖ್ಯೆ : KPTCL/GMT/CIVL(B7)/57/2024-MANAGER ESTATE (E-112104)**

03 SEP 2024

## ಸುತ್ತೋಲೆ

**ವಿಷಯ:** ರಾಜ್ಯದಲ್ಲಿ 66ಕೆವಿ ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಪರಿಹಾರ ನಿಗದಿಪಡಿಸುವ ಪರಿಷ್ಕೃತ ಮಾರ್ಗಸೂಚಿಯ ಬಗ್ಗೆ.

**ಉಲ್ಲೇಖ:**
1. ನಿಗಮದ ಆದೇಶ ಸಂಖ್ಯೆ KPTCL/SA8/B7/19105/15-16 ಬೆಂಗಳೂರು ದಿನಾಂಕ 25.05.2018
2. ನಿಗಮದ ಸುತ್ತೋಲೆ ಸಂಖ್ಯೆ KPTCL/SA8/B7/19105/15-16 ದಿನಾಂಕ 23.01.2019
3. ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ Energy VSC 2022, ಬೆಂಗಳೂರು ದಿನಾಂಕ 22.08.2022
4. ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ Energy VSC 2022, ಬೆಂಗಳೂರು ದಿನಾಂಕ:16.03.2024
5. ನಿಗಮದ ಸುತ್ತೋಲೆ ಸಂಖ್ಯೆ:KPTCL/GMT/CIVL(B7)/57/2024-MANAGER ESTATE (E-112104) ದಿನಾಂಕ:30.04.2024
6. ನಿಗಮದ ಸುತ್ತೋಲೆ ಸಂಖ್ಯೆ:KPTCL/GMT/CIVL(B7)/57/2024-MANAGER ESTATE (E-112104) ದಿನಾಂಕ:30.07.2024
7. ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ Energy VSC 2022, ಬೆಂಗಳೂರು ದಿನಾಂಕ:20.08.2024
8. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟ ಟಿಪ್ಪಣಿ ದಿನಾಂಕ 02/09/2024.

**************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಘನ ಸರ್ಕಾರ ಹೊರಡಿಸಿರುವ ಉಲ್ಲೇಖ (7) ರಲ್ಲಿನ ಸ್ವಯಂ ವೇದ್ಯವಾದ ಆದೇಶವನ್ನು ಇದರೊಂದಿಗೆ ಲಗತ್ತಿಸಿದೆ. ರಾಜ್ಯದಲ್ಲಿ 66ಕೆ.ವಿ. ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂ ಮಾಲೀಕರಿಗೆ ಪರಿಹಾರ ನಿಗದಿ ಪಡಿಸುವ ಸಂಬಂಧ ಕರ್ನಾಟಕ ಘನ ಸರ್ಕಾರ ಹೊರಡಿಸಿರುವ ಉಲ್ಲೇಖ (7) ರಲ್ಲಿನ ಪರಿಷ್ಕೃತ ಮಾರ್ಗಸೂಚಿಯ ಆದೇಶವನ್ನು ನಿಗಮದಲ್ಲಿ ಅಳವಡಿಸಿಕೊಳ್ಳಲು ಹಾಗೂ ಪ್ರಸರಣ ಮಾರ್ಗಗಳ ಕಾಮಗಾರಿಯ ವಿಸ್ತೃತ ಯೋಜನಾ ವರದಿಯನ್ನು (DPR) ಸಿದ್ಧಪಡಿಸುವಾಗ ಗೋಪುರ ಮತ್ತು ಕಾರಿಡಾರ್ ಜಾಗಗಳ ಭೂ ಪರಿಹಾರವನ್ನು ಉಲ್ಲೇಖ (7) ರಲ್ಲಿನ ಆದೇಶದಂತೆ ಅಂದಾಜಿಸಿ ಅಳವಡಿಸಿಕೊಳ್ಳುವಂತೆ ಸೂಚಿಸಿದೆ.

ಮುಂದುವರೆದು, ವಿದ್ಯುತ್ ಪ್ರಸರಣ ಮಾರ್ಗ ರಚನೆಗೆ ಭೂ ಮಾಲೀಕರಿಂದ ರಹದಾರಿ (RoW) ಪಡೆಯಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಭೂ ಪರಿಹಾರವನ್ನು ಉಲ್ಲೇಖ (7) ರಲ್ಲಿನ ಮಾರ್ಗಸೂಚಿಯನ್ವಯ ನಿಗದಿಪಡಿಸಿರುವುದನ್ನು ಖಚಿತಪಡಿಸಿಕೊಂಡು, ಉಲ್ಲೇಖ (6) ರಲ್ಲಿನ ಸುತ್ತೋಲೆಯಲ್ಲಿ ತಿಳಿಸಿರುವಂತೆ ಮುಂದಿನ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದೆ.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)

ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ,
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು
4. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಪ್ರಸರಣ (ಕಾ) / ನಿ (ವೃತ್ತ), ಕವಿಪ್ರನಿನಿ
5. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು
6. ಅಧೀಕ್ಷಕ ಇಂಜಿನಿಯರ್ (ವಿ) (ಐ.ಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
9. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
10. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳು ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
11. ಲೆಕ್ಕಾಧಿಕಾರಿ (ಕೋಡಿಫೀಕೇಷನ್), ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು

# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : ರಾಜ್ಯದಲ್ಲಿ 66 kV ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಪರಿಹಾರ ನಿಗದಿಪಡಿಸುವ ಪರಿಷ್ಕೃತ ಮಾರ್ಗಸೂಚಿಯ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ Energy 376 VSC 2022, ದಿನಾಂಕ: 16.3.2024
2) ಕೇಂದ್ರ ಇಂಧನ ಮಂತ್ರಾಲಯದ ಮಾರ್ಗಸೂಚಿ ಸಂಖ್ಯೆ F.No. 3/4/2016-Trans-Part (4) ದಿನಾಂಕ 14.6.2024
3) ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್ ರವರ ಪ್ರಸ್ತಾವನೆ ಕಡತ ಸಂಖ್ಯೆ KPTCL/GMT/CIVIL(B7)/26/2024, ದಿನಾಂಕ: 7.8.2024

******

**ಪ್ರಸ್ತಾವನೆ :**

ರಾಜ್ಯದಲ್ಲಿ 66 kV ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಪರಿಹಾರ ನಿಗದಿಮಾಡುವ ಸಂಬಂಧ ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಆದೇಶ ಹೊರಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಇಂಧನ ಮಂತ್ರಾಲಯದಿಂದ, sections 67 and 68 of Indian Electricity Act, 2003 read with sections 10 and 16 of Indian Telegraph Act, 1885 in addition to the compensation for normal crop and tree damages ಎಂದು ಉಲ್ಲೇಖಿಸಿ, ದಿನಾಂಕ 14.6.2024 ರಂದು ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಕೆಲವು ಮಾರ್ಪಾಡುಗಳೊಂದಿಗೆ ರಾಜ್ಯದಲ್ಲಿ ಅಳವಡಿಸಿಕೊಳ್ಳುವ ಕುರಿತು ಪ್ರಸ್ತುತ ಚಾಲ್ತಿಯಲ್ಲಿರುವ ಕ್ರಮ ಸಂಖ್ಯೆ (1) ರ ಆದೇಶವನ್ನು ಮಾರ್ಪಡಿಸಿ, ಪರಿಷ್ಕೃತ ಆದೇಶವನ್ನು ಹೊರಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.

ಅದರಂತೆ, ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ Energy 376 VSC 2022, ಬೆಂಗಳೂರು, ದಿನಾಂಕ :20-8-2024**

ಮೇಲ್ಕಂಡ ಅಂಶಗಳ ವಿವರಗಳ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ 66 kV ಮತ್ತು ಮೇಲ್ಪಟ್ಟ ಸಾಮರ್ಥ್ಯದ ವಿದ್ಯುತ್ ಪ್ರಸರಣಾ ಮಾರ್ಗಗಳನ್ನು ನಿರ್ಮಾಣ ಮಾಡುವಾಗ ಸಂಬಂಧಿತ ಭೂ ಪ್ರದೇಶದ ಮಾಲೀಕರಿಗೆ ಪರಿಹಾರ ನಿಗದಿಪಡಿಸುವ ಮಾರ್ಗಸೂಚಿಯನ್ನು ಈ ಕೆಳಕಂಡಂತೆ ಪರಿಷ್ಕರಿಸಿದೆ.

I. **Applicability:** The Compensation shall be payable only for transmission lines supported by tower base of 66 kV voltage level and above, and not for sub-transmission and distribution lines below 66 kV.



Generated from eOffice by ... KUMAR, KPTCL-MGR-EST(PPK), MANAGER, KARNATAKA POWER TRANSMISSION CORPORATION LTD on 20/09/2024 10:50 AM

II. **Authority for determination of compensation**: District Magistrate/District Collector / Deputy Commissioner shall be the authority for determining the compensation.

III. **Determination of Compensation**: The compensation shall be based on the **Guideline value** of the land for:

1. **Tower Base Area** – Least prevailing Guideline value of Non-Agricultural land of residential nature in the village or nearest vicinity shall be considered.

2. **Corridor Area** – Prevailing Guideline value shall be considered depending upon the type of land.

The above said land value shall be determined by the District Magistrate /District Collector / Deputy Commissioner. The determined land value shall serve as the basis for compensation and shall be promptly communicated by the respective District Magistrate / District Collector / Deputy Commissioner.

IV. **Tower base Compensation**

i. Compensation for the tower base area shall be **200% of the land value.** The tower base area shall be the area enclosed by the four legs of the tower at ground level, **plus 1 (one) metre extension** on each side.

V. **RoW Corridor Compensation**

i. The compensation amount for Right-of-Way (RoW) corridor shall be **30% of land value.** Land within the RoW Corridor, as defined in Schedule VII of the Central Electricity Authority (Technical Standards for Construction of Electrical Plants and Electric Lines) Regulations, 2022, **(Annex – I)** shall be eligible for compensation. No Construction activity of any kind would be permitted within the RoW of the transmission line.

ii. In addition to the provisions at IV(i) and V(i) above, **additional compensation in the form of non-usability allowance up to 20% of land value in the notified urban areas and areas covered by tall plantations only,** where vertical clearance requirement of transmission lines will lead to the tall trees to be removed. Further, the presence of tall plantations at the time of taking possession of land shall be certified by Revenue Department based on its records.

VI. **Land owner Identification:** During the check survey conducted at the execution stage, the names of land owners whose property falls within the transmission line's



Generated from eOffice by P PRASANNA KUMAR, KPTCL-MGR-EST(…) KARNATAKA POWER TRANSMISSION CORPORATION LTD on 26/09/2024 10:50 AM

Right-of-Way (RoW) shall be documented. This process shall adhere to the Regulation 84(8) of the Central Electricity Authority (Technical Standards for Construction of Electrical Plants and Electric Lines) Regulations, 2022 – (**Annex – II**).

VII. **Compensation Payment:** Compensation payment shall be one-time and upfront. Whenever possible, compensation shall be paid through various digital payment methods, such as the Aadhaar Enabled Payment System (AEPS) and Unified Payments Interface (UPI).

VIII. **Standard Operating Procedure (SOP):** The Standard Operating Procedure (SOP) for detailed guidelines (**Annex – III**).

IX. **Compensation to existing corridor:** The revised guidelines shall also be applicable to cases of modifications to the existing transmission corridors.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿನೋದ್ ಕುಮಾರ್ ಡಿ.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

**ಇವರಿಗೆ:-**

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ

**ಪ್ರತಿ:-**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. Secretary, MoP, Shrama Shakthi Bhavan, New Delhi.
3. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು.
5. Executive Director, PGCIL, ಸಿಂಗನಾಯಕನಹಳ್ಳಿ, ಯಲಹಂಕ, Near RTO, ಬೆಂಗಳೂರು.
6. ಮಾನ್ಯ ಇಂಧನ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು – ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ
7. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು



... KPTCLMGR-EST(PPK), MANAGER, KARNATAKA POWER TRANSMISSION CORPORATION LTD on 20/09/2024 10:59 AM

(e) IEC 62543 - High Voltage Direct Current (HVDC) Power transmission using Voltage Source Converters (VSC)

(f) IEC 62501 - Voltage sourced converter (VSC) valves for high-voltage direct current (HVDC) power transmission - Electrical testing

(g) IEC 60747-9 - Semiconductor devices - Part 9: Discrete devices – Insulated-Gate Bipolar Transistors (IGBTs)

(h) IEC 61378 (2-3) - Converter transformers

(i) IEC 60076-6 - Power transformers - Part 6: Reactors

(j) IEC 60071 (1- 5) – Insulation Coordination

## SCHEDULE-VII

**(See sub-regulation (4) of regulation 84)**

**Right-of-way (ROW) for normal route, forest area, urban area, populated area and approach section near substation**

| *Voltage level* | *Configuration* | *Conductor type* | *Terrain* | *Design Span* | *String Type* | *RoW width in m (for compensation purpose)* |
|---|---|---|---|---|---|---|
| 765kV D/C | Vertical | ACSR ZEBRA | Normal route without constraint | 400 | "I" String | 67 |
| | | | | | "V" String | |
| | | | | | Tension | |
| | | | Forest | 300 | "V" String | 56 |
| | | | | | Tension | |
| | | | Urban area / populated area / approach section near substation | 250 | "V" String | 54 |
| | | | | | Tension | |
| 765kV S/C | Vertical /Delta | ACSR BERSIMIS | Normal route without constraint | 400 | "I" String | 64 |
| | | | | | "V" String | |
| | | | | | Tension | |
| | | | Forest | 300 | "V" String | 54 |
| | | | | | Tension | |
| | | | Urban area / populated area / approach section near substation | 250 | "V" String | 52 |
| | | | | | Tension | |
| 765kV S/C | Horizontal | ACSR BERSIMIS | Normal route without constraint | 400 | "I" String | 74 |
| | | | | | "V" String | |
| | | | | | Tension | |
| | | | Forest | 300 | "V" String | 65 |
| | | | | | Tension | |
| | | | Urban area / populated area | 250 | "V" String | 62 |



Generated from eOffice by P PRASANNA KUMAR, KPTCL-MGR-EST(...), MANAGER, KARNATAKA POWER TRANSMISSION CORPORATION LTD on 20/09/2024 10:50 AM

| | | | | | | |
|---|---|---|---|---|---|---|
| | | | approach section near substation | | Tension | |
| ±800kV HVDC | Horizontal | ACSR Lapwing | Normal route without constraint/Forest/ Urban | 400 | "V" String | 69 |
| ±500kV HVDC | Horizontal | ACSR Lapwing | Normal route without constraint/Forest/ Urban | 400 | "V" String | 52 |
| 400kV D/C | Vertical | ACSR MOOSE | Normal route without constraint | 400 | "I" String | 46 |
| | | | | | "V" String | |
| | | | | | Tension | |
| | | | Forest | 300 | "V" String | 40 |
| | | | | | Tension | |
| | | | Urban area / populated area / approach section near substation | 250 | "V" String | 38 |
| | | | | | Tension | |
| 400kV S/C | Horizontal/ Vertical | ACSR MOOSE | Normal route without constraint | 400 | "I" String | 52 |
| | | | | | "V" String | |
| | | | | | Tension | |
| | | | Forest | 300 | "V" String | 47 |
| | | | | | Tension | |
| | | | Urban area / populated area / approach section near substation | 250 | "V" String | 44 |
| | | | | | Tension | |
| 1200kV | Horizontal | ACSR Moose | Normal route without constraint/Forest/ Urban | 400 | "V" String | 89 |
| 220kV D/C | Vertical | ACSR ZEBRA | Normal route without constraint | 350 | "I" String | 32 |
| | | | | | "V" String | |
| | | | | | Tension | |
| | | | Forest | 300 | "V" String | 28 |
| | | | | | Tension | |
| | | | Urban area / populated area / approach section near substation | 200 | "V" String | 24 |
| | | | | | Tension | |
| 132kV D/C | Vertical | ACSR PANTHER | Normal route without constraint | 320 | "I" String | 25 |



Digitally signed by P PRASANNA KUMAR, KPTCL-MGR-EST(PPK), MANAGER, KARNATAKA POWER TRANSMISSION CORPORATION LTD on 20/09/2024 10:50 AM

| | | | | | | |
|---|---|---|---|---|---|---|
| | | | | | "V" String | |
| | | | | | Tension | |
| | | | Forest | 200 | "V" String | 21 |
| | | | | | Tension | |
| | | | Urban area / populated area / approach section near substation | 150 | "V" String | 19 |
| | | | | | Tension | |
| 110 kV D/C | | ACSR PANTHER | Normal route without constraint | 305 | "I" String | 22 |
| | | | | | "V" String | |
| | | | | | Tension | |
| | | | Forest | 200 | "V" String | 19 |
| | | | | | Tension | |
| | | | Urban area / populated area / approach section near substation | 150 | "V" String | 17 |
| | | | | | Tension | |
| 66kV | Vertical | ACSR PANTHER | Normal route without constraint | 250 | "I" String | 18 |
| | | | | | "V" String | |
| | | | | | Tension | |
| | | | Forest | 150 | "V" String | 14 |
| | | | | | Tension | |
| | | | Urban area / populated area / approach section near substation | 100 | "V" String | 13 |

Note: D/c : double circuit; S/c: single circuit

RAKESH GOYAL, Secy.

[ADVT.-III/4/Exty./518/2022-23]

Note: The principal regulations were published in the Gazette of India, Extraordinary, Part III, Section 4, vide notification No. CEA/TETD/MP/R/01/2010, dated the 20th August, 2010.

Uploaded by Dte. of Printing at Government of India Press, Ring Road, Mayapuri, New Delhi-110064 and Published by the Controller of Publications, Delhi-110054



Generated from eOffice by P.PRASANNA KUMAR, KPTCL-MGR-EST(PPK), MANAGER, KARNATAKA POWER TRANSMISSION CORPORATION LTD on 20/09/2024 10:50 AM

File No. KPTCL/GMT/CIVL(B7)/114/2023-MANAGER ESTATE (Computer No. 82176)
0330/202 KPTCL-MGR-EST

Annexure II



(b) Horn gap fuse with air break switch shall be provided on high voltage side and switch fuse unit or wire fuse on low voltage side shall be provided for transformers below 100 kVA.

80. Earthing- Earthing shall be provided for the DSS complying with relevant Indian Standards and Central Electricity Authority (Measures relating to Safety and Electric Supply) Regulations, 2010 or any successor or subsequent Regulations in this regard.

81. LT Cables. - (1) IS compliant XLPE cables shall be used for connecting LT supply from transformer bushings to the LT circuit breaker in the distribution box and for taking out outgoing feeders from the fuse units to the overhead lines.

(2) The LT cables may be armoured or unarmoured for transformers rated less than 100 kVA and shall be armoured for transformers of 100 kVA and higher ratings.

(3) The cables shall be properly clamped to the support without damaging the insulation.

(4) A loop arrangement shall be made at the connecting end and laying of cables shall be in such a way that rain water does not enter.

82. Meters. - The installation of meters shall be in conformance to the Central Electricity Authority (Installation and Operation of Meters) Regulations, 2006.

83. Reactive Compensation. - (1) Where the power factor is low, reactive compensation shall be provided on the distribution transformers by fixed or automatic switched type capacitors of adequate rating.

(2) In case of fixed capacitors it shall be ensured that the rating of the capacitors is such as to prevent over compensation during off peak period.

(3) In cases where loads fluctuate very fast or there is large intraday reactive variation, a suitable dynamic compensation like thyristor switched capacitors shall be considered.

(4) In loads which are rich in harmonics, suitable harmonics filters or de-tuned filter banks shall be considered.

## Chapter V

## PART-A

## ELECTRIC LINES (66 kV AND ABOVE)

84. General.—

(1) The transmission system planning shall be in accordance with Central Electricity Authority's "Manual on Transmission Planning Criteria".

(2) The transmission line shall be designed and constructed to give a life of not less than thirty five years.

(3) Overhead transmission lines shall be planned, designed and constructed at least in double circuit configuration.

Provided that for 765 kV lines single circuit configuration can be used with the approval of the National Committee on Transmission.

(4) Right-of-way for transmission lines of different voltage levels (with specific conductor type and configuration, design span and string arrangement) traversing through normal terrain or route without constraint, forest area, urban area, populated area and approach section near substation shall be as per SCHEDULE-VII.

(5) For transmission lines in areas where Right-of-way constraint is encountered, appropriate technology options such as use of steel pole structure, narrow based lattice towers, multi-circuit and multi-voltage towers, lattice or steel pole structure with one side stringing, XLPE cable or Gas Insulated Line, compact towers with insulated cross arm, and Voltage Source Converter based HVDC transmission on overhead line or underground cable shall be adopted.

(6) Steel pole structure, Multi-circuit (more than two circuits) or multi-circuit and multi-voltage towers for overhead lines upto and including 400 kV voltage level shall be considered in the urban areas, approach section of substation or switchyard and as an alternative to number of parallel lines passing through forest, eco-sensitive zone, wildlife sanctuary for effective use of available corridor.

(7) Routing of a transmission line shall avoid large habitations, densely populated areas, protected or reserved forest or National Parks or Wild Life Sanctuaries, the habitant zones of Great Indian Bustard and other protected species, civil or military airfields and aircraft landing approaches.

(8) The names of owners of the land falling under RoW of the transmission line shall be recorded after carrying out the check survey at the time of execution.

(9) The Transmission Service Provider or Transmission licensee shall arrange consents and approvals from



Generated from eOffice by P PRASANNA KUMAR, KPTCL-MGR-EST(PPK), MANAGER, KARNATAKA POWER TRANSMISSION CORPORATION LTD on 20/09/2024 10:50 AM

Annex-III

## Standard Operating Procedure (SOP)

Identify Landowners and issue notice to proceed (by KPTCL)

↓

Collect documents (e.g. proof of identity and ownership) (by KPTCL)

↓

Verify land records with revenue maps/officials (by revenue officials)

↓

In case of multiple landowners, obtain NOC from all co-owners attested by Revenue officers (by KPTCL)

↓

Measure tower base/corridor area in the presence of landowner and obtain signature of landowners/revenue officials (by KPTCL)

↓

In case of grievances relating to land rates, District Magistrate/District Collector / Deputy Commissioner to issue orders on land rates

↓

District Magistrate/District Collector / Deputy Commissioner to fix compensation

↓

KPTCL to pay compensation. Compensation payment to include: tower base area and corridor area. It will also include permanent and temporary structures like hutment, house, line shifting etc. based on assessment. The measurement sheet will be verified by project RoW lead (Concerned KPTCL Officials) and countersigned by landowner and revenue officials concerned

↓

Disburse the Payment (by KPTCL/Construction Agency)

↓

Collect receipt from landowners (by KPTCL/Construction Agency)



Generated from eOffice by P.PRASANNA KUMAR, KPTCL-MGR-EST(PPK), MANAGER, KARNATAKA POWER ... CORPORATION LTD on 20/09/2024 10:50 AM

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.
ದೂರವಾಣಿ ಸಂಖ್ಯೆ : 080-22212343
ಅಂತರ್ಜಾಲ : https://kptcl.karnataka.gov.in
ಇ-ಮೇಲ್ ವಿಳಾಸ : director.ahr.kptcl@gmail.com

ವಿಷಯ: ರಾಜ್ಯದಲ್ಲಿ 66ಕೆ.ವಿ. ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಭೂ ಪರಿಹಾರ ನಿಗದಿಪಡಿಸುವ ಪರಿಷ್ಕೃತ ಮಾರ್ಗಸೂಚಿಯ ಕ್ರಮ ಸಂಖ್ಯೆ (7) ರಲ್ಲಿನ ಮಾರ್ಪಾಡು ಬಗ್ಗೆ.

ಉಲ್ಲೇಖ:
1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ Energy 376 VSC 2022, ದಿನಾಂಕ 20.08.2024
2. ಕವಿಪ್ರನಿನಿ ಸುತ್ತೋಲೆ ಸಂಖ್ಯೆ KPTCL/GMT/CIVL(B7)/57/2024-MANAGER ESTATE (E-112104) ದಿನಾಂಕ 03.09.2024
3. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿಸಲ್ಪಟ್ಟ ಟಿಪ್ಪಣಿ ದಿನಾಂಕ 28.11.2024

**********

ಪೀಠಿಕೆ:

1. ರಾಜ್ಯದಲ್ಲಿ 66ಕೆ.ವಿ. ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಭೂ ಪರಿಹಾರ ನಿಗದಿಪಡಿಸುವ ಕುರಿತು ಪರಿಷ್ಕೃತ ಮಾರ್ಗಸೂಚಿಯನ್ನು ಉಲ್ಲೇಖ (1) ರಲ್ಲಿ ಕರ್ನಾಟಕ ಸರ್ಕಾರದಿಂದ ಕೆಳಕಂಡಂತೆ ಹೊರಡಿಸಲಾಗಿತ್ತು.

I. **Applicability**: The compensation shall be payable only for transmission lines supported by a tower base of 66kV voltage level and above, and not for sub-transmission and distribution lines below 66kV.

II. **Authority for determination of compensation:** District Magistrate / District Collector / Deputy Commissioner shall be the authority for determining the compensation.

III. **Determination of compensation:** The compensation shall be based on **the Guideline Value** of the land for :

1. **Tower Base Area** - Least prevailing Guideline value of Non-Agricultural land of residential nature in the village or nearest vicinity shall be considered.
2. **Corridor Area** - Prevailing Guideline value shall be considered depending upon the type of land.

The above said land value shall be determined by the District Magistrate / District Collector / Deputy Commissioner. The determined land value shall serve as the basis for compensation and shall be promptly communicated by the respective District Magistrate / District Collector / Deputy Commissioner.

IV. **Tower Base Compensation:**

i. Compensation for the tower base area shall be **200% of the land value**. The tower base area shall be the area enclosed by the four legs of the tower at ground level, plus **1 (one) meter extension** on each side.

V. **RoW Corridor Compensation :**

i) The Compensation amount for Right-of-Way (RoW) corridor shall be **30% of land value**. Land within the RoW Corridor, as defined in Schedule VII of the Central Electricity Authority (Technical Standards for Construction of Electrical Plants and Electric Lines) Regulations, 2022, (**Annex – I**) shall be eligible for compensation. No Construction activity of any kind would be permitted within the RoW of the transmission line.

ii) In addition to the provisions at **IV (i) and V (i)** above, **additional compensation in form of Non-Usability allowance up to 20% of land value** in the **notified urban areas and areas covered by tall plantations only,** where vertical clearance requirement of transmission lines will lead to the tall trees to be removed. Further the presence of tall plantations at the time of taking possession of land shall be certified by Revenue Department based on its records.

**VI. Land Owner Identification:** During the check survey conducted at the execution stage, the names of land owners whose property falls within the transmission line's Right-of-Way (RoW) will be documented. This process shall adhere to the Regulation 84(8) of the Central Electricity Authority (Technical Standards for Construction of Electrical Plants and Electric Lines) Regulations, 2022. (Annex – II)

**VII. Compensation Payment:** Compensation payment shall be one-time and upfront. Whenever possible, compensation will be paid through various digital payment methods, such as the Aadhaar Enabled Payment System (AEPS) and Unified Payments Interface (UPI).

**VIII. Standard Operating Procedure (SOP):** The Standard Operating Procedure (SOP) for detailed guidelines (**Annex – III**)

**IX. Compensation to existing corridor:** The revised guidelines will also be applicable to cases of any modifications to the existing transmission corridors.

2. ಸದರಿ ಮಾರ್ಗಸೂಚಿಯಂತೆ, ಭೂ ಮಾಲೀಕರಿಗೆ ಭೂ ಪರಿಹಾರವನ್ನು ಒಂದು ಬಾರಿ ಮತ್ತು ಮುಂಗಡವಾಗಿ ಪಾವತಿಸಿದಾಗ, ಪ್ರಸರಣ ಮಾರ್ಗದ ನಿರ್ಮಾಣ ಅವಧಿಯ ಹಲವು ಹಂತಗಳಲ್ಲಿ (ಗೋಪುರ ನಿರ್ಮಾಣ, ಇನ್ಸುಲೇಟರ್ ಅಳವಡಿಕೆ, ತಂತಿ ಎಳೆಯುವಿಕೆ ಹಾಗೂ ಇನ್ನಿತರೆ ಸಂದರ್ಭಗಳಲ್ಲಿ) ಭೂ ಮಾಲೀಕರಿಂದ ಪ್ರತಿ ಹಂತದಲ್ಲೂ, ಪರಿಹಾರ ಕೋರುತ್ತಿರುವುದಾಗಿ ಮತ್ತು ಪರಿಹಾರವನ್ನು ಬ್ಯಾಂಕ್ ಚೆಕ್‌ಗಳ ಮೂಲಕ ಪ್ರಸರಣ ಮಾರ್ಗದ ಗುತ್ತಿಗೆದಾರರು ನೀಡುತ್ತಿರುವ ಬದಲು ಡಿ.ಡಿ (ಡಿಮ್ಯಾಂಡ್ ಡ್ರಾಫ್ಟ್) ಮುಖಾಂತರ ಪಾವತಿಸಿದ್ದಲ್ಲಿ ಪರಿಹಾರ ಪಾವತಿಯ ದಾಖಲೆಗಳನ್ನು ಕಾನೂನುಬದ್ಧಗೊಳಿಸಲು ಅನುವಾಗುವುದೆಂದು ಕವಿಪ್ರನಿನಿಯ 400/220/ 110/66 ಕೆ.ವಿ. ಪ್ರಸರಣ ಮಾರ್ಗಗಳ ಕಾಮಗಾರಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯದನ್ವಯ, ಸದರಿ ಮಾರ್ಗಸೂಚಿಯಲ್ಲಿನ ಕ್ರಮ ಸಂಖ್ಯೆ (7)

ರಲ್ಲಿ Compensation Payment ರಡಿಯಲ್ಲಿ ಕೆಳಕಂಡಂತೆ ಮಾರ್ಪಡಿಸಿ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: KPTCL/GMT/CIVL(B7)/26/2024-DGMC (E- 102995) ದಿನಾಂಕ:** 09 DEC 2024

ರಾಜ್ಯದಲ್ಲಿ 66ಕೆ.ವಿ. ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಭೂ ಪರಿಹಾರ ನಿಗದಿಪಡಿಸುವ ಸಂಬಂಧ, ಕರ್ನಾಟಕ ಸರ್ಕಾರದಿಂದ ಹೊರಡಿಸಲಾದ ಉಲ್ಲೇಖ (1) ರ ಮಾರ್ಗಸೂಚಿಯಲ್ಲಿನ ಕ್ರಮ ಸಂಖ್ಯೆ (7) ರಲ್ಲಿ ಕೆಳಕಂಡಂತೆ ಮಾರ್ಪಡಿಸಿ, ನಿಗಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಉಳಿದಂತೆ ಇನ್ನಾವುದೇ ಬದಲಾವಣೆ ಇರುವುದಿಲ್ಲ.

| Sl. No. | Description | As Existing | As Modified |
|---|---|---|---|
| 7 | Compensation Payment | **Compensation payment shall be one-time and upfront.** Whenever possible, compensation will be paid through various digital payment methods, such as the Aadhaar Enabled Payment System (AEPS) and Unified Payments Interface (UPI). | ***Compensation payment shall be made stage wise and compensation shall be paid through "Demand Draft".*** *Whenever possible, compensation will be paid through various digital payment methods, such as the Aadhaar Enabled Payment System (AEPS) and Unified Payments Interface (UPI)* ***with the permission of KPTCL.*** |

ಸಹಿ/- 09/12/24

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ,
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ,
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು
4. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಪ್ರಸರಣ (ಕಾ) / ನಿ (ವೃತ್ತ), ಕವಿಪ್ರನಿನಿ
5. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು
6. ಅಧೀಕ್ಷಕ ಇಂಜಿನಿಯರ್ (ವಿ) (ಐಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
9. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
10. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಪ್ರಸರಣ) / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
11. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ದೂರವಾಣಿ ಸಂಖ್ಯೆ : 080-22212343

ಅಂತರ್ಜಾಲ : https://kptcl.karnataka.gov.in

ಇ-ಮೇಲ್ ವಿಳಾಸ : director.ahr.kptcl@gmail.com


**KPTCL/GMT/CIVIL(B7)/26/2024-DGMC (E- 102995)**

4 FEB 2025

**ಸುತ್ತೋಲೆ**

**ವಿಷಯ:** ರಾಜ್ಯದಲ್ಲಿ 66ಕೆ.ವಿ. ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಭೂ ಪರಿಹಾರ ನಿಗದಿಪಡಿಸುವ ಪರಿಷ್ಕೃತ ಮಾರ್ಗಸೂಚಿಯ ಕ್ರಮ ಸಂಖ್ಯೆ (7) ರಲ್ಲಿನ ತಿದ್ದುಪಡಿ ಬಗ್ಗೆ.

**ಉಲ್ಲೇಖ:**
1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ Energy 376 VSC 2022, ದಿನಾಂಕ 20.08.2024.
2. ನಿಗಮದ ಸುತ್ತೋಲೆ ಸಂಖ್ಯೆ KPTCL/GMT/CIVL(B7)/57/2024-MANAGER ESTATE (E-112104) ದಿನಾಂಕ 03.09.2024.
3. ನಿಗಮದ ಆದೇಶ ಸಂಖ್ಯೆ KPTCL/GMT/CIVL(B7)/26/2024-DGMC(E-102995) ದಿನಾಂಕ 09.12.2024.
4. ನಿಗಮದ ಸುತ್ತೋಲೆ ಸಂಖ್ಯೆ KPTCL/GMT/CIVL(B7)/26/2024-DGMC(E-102995) ದಿನಾಂಕ 08.01.2025.
5. ಕರ್ನಾಟಕ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ Energy 376 VSC 2022, ದಿನಾಂಕ 22.01.2025.
6. ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸಲ್ಪಟ್ಟ ಟಿಪ್ಪಣಿ ದಿನಾಂಕ 03.02.2025.

**********

ಕರ್ನಾಟಕ ಸರ್ಕಾರ ಹೊರಡಿಸಿರುವ ಉಲ್ಲೇಖ (5) ರಲ್ಲಿನ ಸ್ವಯಂ ವೇದ್ಯವಾದ ತಿದ್ದುಪಡಿ ಆದೇಶವನ್ನು ಇದರೊಂದಿಗೆ ಲಗತ್ತಿಸಿದೆ. ರಾಜ್ಯದಲ್ಲಿ 66ಕೆ.ವಿ. ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಭೂ ಪರಿಹಾರ ನಿಗದಿಪಡಿಸುವ ಸಂಬಂಧ ಉಲ್ಲೇಖ (1) ರಲ್ಲಿ ಹೊರಡಿಸಲಾದ ಪರಿಷ್ಕೃತ ಮಾರ್ಗಸೂಚಿಯ ಆದೇಶದಲ್ಲಿನ ಕ್ರಮ ಸಂಖ್ಯೆ VII: Compensation Payment ಭಾಗದಲ್ಲಿ ತಿದ್ದುಪಡಿ ಮಾಡಿ ಕರ್ನಾಟಕ ಸರ್ಕಾರದಿಂದ ಉಲ್ಲೇಖ (5) ರಲ್ಲಿ ತಿದ್ದುಪಡಿ ಆದೇಶವನ್ನು ಹೊರಡಿಸಲಾಗಿದ್ದು, ಸದರಿ ಆದೇಶದಲ್ಲಿರುವ ಅಂಶಗಳನ್ನು ನಿಗಮದಲ್ಲಿ ಅಳವಡಿಸಿಕೊಳ್ಳುವಂತೆ ಸೂಚಿಸಿದೆ.

ಡಿ.ಎಸ್. 04/02/25

ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:-

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ,
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ,
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು
4. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಕವಿಪ್ರನಿನಿ
5. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ,ಕಾವೇರಿ ಭವನ, ಬೆಂಗಳೂರು
6. ಅಧೀಕ್ಷಕ ಇಂಜಿನಿಯರ್ (ವಿ) (ಐ.ಟಿ) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ) / (ಸಿವಿಲ್), ಕವಿಪ್ರನಿನಿ
9. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ
10. ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಯೋಜನೆಗಳು) / ನಿರ್ದೇಶಕರು (ಕಾರ್ಯಾಚರಣೆ) / ನಿರ್ದೇಶಕರು (ಹಣಕಾಸು) / ನಿರ್ದೇಶಕರು (ಆ ಮತ್ತು ಮಾ.ಸಂ) ರವರುಗಳು ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
11. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಕರ್ನಾಟಕ ಸರ್ಕಾರ**

ಸಂಖ್ಯೆ: Energy 376 VSC 2022

ಕರ್ನಾಟಕ ಸರ್ಕಾರದ ಸಚಿವಾಲಯ
ಇಂಧನ ಇಲಾಖೆ, ವಿಕಾಸ ಸೌಧ,
ಬೆಂಗಳೂರು, ದಿನಾಂಕ:22-1-2025.

**ತಿದ್ದುಪಡಿ ಆದೇಶ**

ರಾಜ್ಯದಲ್ಲಿ 66kV ಮತ್ತು ಮೇಲ್ಪಟ್ಟ ಸಾಮರ್ಥ್ಯದ ಪ್ರಸರಣಾ ಮಾರ್ಗ ರಚನೆಗೆ ರಹದಾರಿ (RoW) ಪಡೆಯಲು ಭೂಮಾಲೀಕರಿಗೆ ಪರಿಹಾರ ನಿಗದಿಪಡಿಸುವ ಸಂಬಂಧ ಪರಿಷ್ಕೃತ ಮಾರ್ಗಸೂಚಿಗಳ ಬಗ್ಗೆ ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ Energy 376 VSC 2022, ದಿನಾಂಕ: 20.8.2024 ರ ಆದೇಶದ ಭಾಗದಲ್ಲಿರುವ.

VII. **Compensation Payment:** Compensation payment shall be one-time and upfront. Whenever possible, compensation shall be paid through various digital payment methods, such as the Aadhaar Enabled Payment System (AEPS) and Unified Payments Interface (UPI) ಎಂಬುದರ ಬದಲಾಗಿ,

M.D.
24 JAN 2025
KPTCL

**VII. Compensation Payment :**

Total Compensation payment shall be paid in stages as below

a) <u>Tower base area:</u>

1) 30% of Compensation shall be paid during Tower foundation work
2) 30% of Compensation shall be paid during Tower erection work
3) Balance 40% of Compensation shall be paid during stringing of conductor

b) <u>Corridor area:</u>

100% of Compensation shall be paid during stringing of conductor.

Compensation shall be paid through "Demand Draft". Whenever possible, compensation shall be paid through various digital payment methods such as the Aadhaar Enabled Payment System (AEPS) and Unified Payments Interface (UPI) ಎಂದು ತಿದ್ದಿ ಓದಿಕೊಳ್ಳುವುದು.

ಉಳಿದಂತೆ ದಿನಾಂಕ 20.8.2024 ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿನೋದ್ ಕುಮಾರ್ ಡಿ.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ-2
ಇಂಧನ ಇಲಾಖೆ

ಇವರಿಗೆ:

ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯ ಪತ್ರ ಪ್ರಕಟಣೆಗಾಗಿ

ಪ್ರತಿ:

1. Secretary, MoP, Shrama Shakthi Bhavan, New Delhi.
2. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
3. ವ್ಯವಸ್ಥಾಪಕ ನಿರ್ದೇಶಕರು, ಕೆಪಿಟಿಸಿಎಲ್, ಕಾವೇರಿ ಭವನ, ಬೆಂಗಳೂರು.

4. Executive Director, PGCIL, ಸಿಂಗನಾಯಕನಹಳ್ಳಿ, ಯಲಹಂಕ, Near RTO, ಬೆಂಗಳೂರು.
5. ಮಾನ್ಯ ಇಂಧನ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು – ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ
6. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು ರವರು ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತರಲು ಕೋರಿದೆ
7. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರು ಅಪರ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೆ ತರಲು ಕೋರಿದೆ